ಬಾಡಿಗೆ ಕಟ್ಟಡದಲ್ಲಿ ಶಾಲೆಯನ್ನು ಕಲಿಯುತ್ತಾ ಇದ್ದು, ಆ ಕಟ್ಟಡವು ಶಿಕ್ಷಣಕ್ಕೆ ಯೋಗ್ಯವಾದುದ್ದು ಸಹ ಇರುವುದಿಲ್ಲ. ಹೀಗಾಗಿ ಉರ್ದು ವಿದ್ಯಾರ್ಥಿಗಳಿಗೆ ಬಹಳ ತೊಂದರೆ ಆಗಿರುತ್ತದೆ.

ಈ ಮೊದಲು ಜಿಲ್ಲಾ ಪರಿಷತ್ತಿನವರು ಬೈಲ ಹೊಂಗಲ್ ನಗರದಲ್ಲಿ ಉರ್ದು ಮಕ್ಕಳ ಸಲುವಾಗಿ ನಾಲ್ಕು ಶಾಲಾ ಕೋಣೆಗಳನ್ನು ಕಟ್ಟಲು ಆಜ್ಞೆ ಮಾಡಿದ್ದರೂ ಆ ಶಾಲಾ ಕೋಣೆ ಕಟ್ಟಲು ಜಾಗ ಇಲ್ಲದೆ ಇರುವ ಕಾರಣ ಆ ಕೋಣೆಗಳನ್ನು ಕನ್ನಡ ಶಾಲೆಯ ಆವರಣದಲ್ಲಿ ಕನ್ನಡ ವಿದ್ಯಾರ್ಥಿಗಳ ಸಲುವಾಗಿ ಕಟ್ಟಲಾಯಿತು. ಹೀಗಾಗಿ ಉರ್ದು ಮಕ್ಕಳಿಗೆ ಬೈಲಹೊಂಗಲ ನಗರದಲ್ಲಿ ಒಂದು ಶಾಲೆಯ ಕೋಣೆ ಇರುವುದಿಲ್ಲ.

ಆ ಕಾರಣ ಕೂಡಲೇ ಅಲ್ಲಿ ಹತ್ತು ಶಾಲೆಯ ಕೋಣೆಗಳನ್ನು ಉರ್ದು ವಿದ್ಯಾರ್ಥಿಗಳ ಸಲುವಾಗಿ ಕಟ್ಟಲು ಮುಖ್ಯ ಕಾರ್ಯದರ್ಶಿ, ಜಿಲ್ಲಾ ಪರಿಷತ್ತು, ಬೆಳಗಾಂ ಇವರಿಗೆ ಆದೇಶ ನೀಡಲು ನಾನು ತಮ್ಮ ಮುಖಾಂತರ ಗ್ರಾಮೀಣ ಅಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

(ಶ್ರೀ ಬಿ. ಶಿವಣ್ಣ ಸಮಾಜ ಕಲ್ಯಾಣ ಸಚಿವರು) (ಶಿಕ್ಷಣ ಸಚಿವರ ಪರವಾಗಿ) :

ಮಾನ್ಯ ಉಪಾಧ್ಯಕ್ಷಿಣಿಯವರೆ, ಬೈಲಹೊಂಗಲ ನಗರದಲ್ಲಿ ಒಟ್ಟು 7 ಪ್ರಾಥಮಿಕ ಶಾಲೆಗಳಿದ್ದು, ಅವುಗಳಲ್ಲಿ 5 ಕನ್ನಡ ಶಾಲೆಗಳು ಹಾಗೂ 2 ಉರ್ದು ಶಾಲೆಗಳಿವೆ. ಉರ್ದು ಪ್ರಾಥಮಿಕ ಶಾಲೆಗೆ ಬೇಕಾದ ಕಟ್ಟಡವನ್ನು ಕಟ್ಟಲು ಬೈಲಹೊಂಗಲದ ನಗರ ಸಭೆಯು ನಿವೇಶನವನ್ನು ನೀಡಲು ಭರವಸೆಯನ್ನು ನೀಡಿರುತ್ತದೆ. ಆದ ಕಾರಣ ನಿವೇಶನ ಮಂಜೂರಾತಿಗಾಗಿ ಸರ್ಕಾರದ ಮಟ್ಟದಲ್ಲಿ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯೊಡನೆ ವ್ಯವಹರಿಸುತ್ತಿದ್ದು ನಿವೇಶನ ಮಂಜೂರಾದ ಕೂಡಲೇ ಕಟ್ಟಡದ ಬಾಬ್ತು ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಮಂಗಳೂರು ಅಳಿವೆ ಬಾಗಿಲಲ್ಲಿ ಹೂಳೆತ್ತುವ ಕೆಲಸವನ್ನು ಪೂರ್ಣಗೊಳಿಸುವುದು,

ಶ್ರೀ ಬಿ.ಎಂ. ಇದಿನಬ್ಬ : ಮಂಗಳೂರಿನ ಅಳಿವೆ ಬಾಗಿಲಿನಲ್ಲಿ ವರ್ಷಂಪ್ರತಿ ಮೀನುಗಾರರ ನೌಕೆಗಳು ಮರಳ ದಿಣ್ಣೆಗೆ ತಾಗಿ ನಾಶವಾಗುತ್ತಿರುವುದು, ಅದೇ ರೀತಿ ಜೀವಗಳ ಹಾನಿಯಾಗುತ್ತಿರುವುದು ವಾಡಿಕೆಯಾಗಿರುತ್ತದೆ. ಇಂತಹ ಅನಾಹುತ ಆಗಲಿಕ್ಕೆ ಕಾರಣ ಅಳಿವೆ ಬಾಗಿಲಿನಲ್ಲಿರುವ ಮರಳನ್ನು ಹೂಳೆತ್ತುವ ಮೂಲಕ ತೆಗೆಯದೆ ಇರುವುದು. ಅಳಿವೆ ಬಾಗಿಲಿನಲ್ಲಿ ಹೂಳೆತ್ತುವ ಕೆಲಸ ತುರ್ತಾಗಿ ಆಗಬೇಕೆಂದು ಕೆಲವು ವರ್ಷಗಳಿಂದ ಕೇಳುತ್ತಲೇ ಬಂದಿರುತ್ತೇವೆ. ಜೀವಹಾನಿ, ನೌಕೆಗಳ ಹಾನಿ ಆಗುತ್ತಲೇ ಇದೆ, ಹೂಳೆತ್ತಲು ಡ್ರೆಜ್ಜರ್ ಇಲ್ಲ ಎನ್ನುವ ಉಡ್ಡಿ ಹೇಳಲಾಗುತ್ತಿದೆ.

ಆದಕಾರಣ ಅಳಿವೆ ಬಾಗಿಲಿನ ಹೂಳೆತ್ತುವ ಕಾರ್ಯ ಯಾವಾಗ ಪೂರ್ಣಗೊಳ್ಳುತ್ತದೆ, ಈ ಕುರಿತು ತುರ್ತು ಕ್ರಮ ವಹಿಸಲಾಗಿದೆಯೇ ಈ ಕುರಿತು ಮೀನುಗಾರಿಕಾ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎ.ಎಂ. ಬೆಳಿಯಪ್ಪ (ಮೀನುಗಾರಿಕಾ ಮತ್ತು ಬಂದರುಗಳ ರಾಜ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷಣಿಯವರೆ, ಹಳೇ ಮಂಗಳೂರು ಬಂದರು ವಾಣಿಜ್ಯ ಹಾಗೂ ಮೀನುಗಾರಿಕಾ ಬಂದರು ಆಗಿದ್ದು ಈ ಬಂದರಿನಲ್ಲಿ ಹೂಳೆತ್ತುವ

ಬಗ್ಗೆ ನೌಕೋದ್ಯಮಿಗಳಿಂದ ಹಾಗೂ ಸ್ಥಳೀಯ ಮೀನುಗಾರ ಮುಖಂಡರಿಂದ ಅಳಿವೆ ಬಾಗಿಲಿನಲ್ಲಿ ಹೂಳೆತ್ತುವ ಕಾರ್ಯವನ್ನು ಕೈಗೊಳ್ಳಬೇಕೆಂದು ಸರಕಾರವನ್ನು ಮೇಲಿಂದ ಮೇಲೆ ಒತ್ತಾಯಿಸಿದ್ದರ ಪರಿಣಾಮವಾಗಿ ಸರಕಾರವು ಮಂಗಳೂರು ಹಳೇ ಬಂದರು ಅಳಿವೆ ಬಾಗಿಲಿನಲ್ಲಿ ಹೂಳೆತ್ತುವ ಕಾರ್ಯವನ್ನು ಕೈಗೊಳ್ಳಲು ನಿರ್ಧರಿಸಿ ಟಂಡರನ್ನು ಕರೆಯಲು ಇಲಾಖೆಗೆ ಅನುಮತಿ ನೀಡಿತು. ಕರೆದ ಟೆಂಡರಿಗೆ ಪ್ರತಿಯಾಗಿ ಕೇಂದ್ರ ಸರ್ಕಾರದ ಸಂಸ್ಥೆಯಾದ ಮ.ಡಿ.ಸಿ.ಐ ವಿಶಾಖಿಪಟ್ಟಣ ಇವರು ಏಕೈಕ ಟೆಂಡರನ್ನು ಸಲ್ಲಿಸಿದ್ದು ಟೆಂಡರನ್ನು ಪರಿಶೀಲಿಸಿ ಸರಕಾರದ ಆದೇಶದಂತೆ ಮೆ.ಡಿಸಿಐನವರಿಗೆ ಹೂಳೆತ್ತುವ ಕಾರ್ಯವನ್ನು ವಹಿಸಿ ಕೊಡಲಾಯಿತು. ಮೆ.ಡ್ರೆಜ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರು ದಿ.27-11-89 ರಂದು ಹಳೇ ಮಂಗಳೂರು ಅಳಿವೆ ಬಾಗಿಲನಲ್ಲಿ ಹೂಳೆತ್ತುವ ಕಾರ್ಯವನ್ನು ಸುಧಾರಿತ ಬೆಡ್ ಲೆವಲರ್ ಮೂಲಕ ಕೈಗೆತ್ತಿಕೊಂಡರೂ ದಿನಾಂಕ 28-11-89 ರಂದು ಹೂಳೆತ್ತುವ ಕಾರ್ಯ ಮುಗಿಸಿ ಹಿಂತಿರುವಾಗ ಯಂತ್ರವನ್ನು ಜಗ್ಗುತ್ತಿದ್ದ ನಾವೆಯು ಸಮುದ್ರದಲ್ಲಿ ಮುಳುಗಿ ಅಪಾಯ ಸಂಭವಿಸಿತ್ತು. ಇದನ್ನು ಮನಗಂಡು ಹಳೇ ಬಂದರು ಅಳಿವೆ ಬಾಗಿಲಿನಲ್ಲಿ ಹೂಳೆತ್ತುವ ಕಾರ್ಯವನ್ನು ಅಲ್ಲಿಗೆ ಕೈಬಿಡಲಾಯಿತು. ದಿನಾಂಕ 3-3-90 ರಂದು ಮಾನ್ಯ ಬಂದರು ಹಾಗೂ ಆಗಿನ ಮೀನುಗಾರಿಕಾ ಸಚಿವರ ಕೊಠಡಿಯಲ್ಲಿ ಈ ಸಂಬಂಧ ಜರುಗಿದ ಸಭೆಯಲ್ಲಿ ಹಳೇ ಮಂಗಳೂರು ಬಂದರಿನಲ್ಲಿ ಬ್ರೇಕ್ ವಾಟರ್ ನಿರ್ಮಾಣದ ಬಳಿಕವೇ ಅಳಿವೆ ಬಾಗಿಲಿನ ಹೂಳೆತ್ತುವ ಕಾರ್ಯವನ್ನು ಕೈಗೆತ್ತಿಕೊಳ್ಳಬಹುದೆಂದು ತೀರ್ಮಾನಿಸಲಾಯಿತು. ಅದರಂತೆ ಈಗ ಬ್ರೇಕ್‌ವಾಟರ್ ಕಾಮಗಾರಿಯು ಜರುಗುತ್ತಿದ ಅಳಿವೆಯ ಹೂಳೆತ್ತುವ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸಹಾಯವಾಗುವಂತೆ ಈಗಾಗಲೇ ಟೆಂಡರನ್ನು ಸ್ವೀಕರಿಸಲಾಗಿದೆ. ಹಾಗೂ ೫ ಹೂಳೆತ್ತುವ ಸಂಸ್ಥೆಗಳು ಟೆಂಡರನ್ನು ಸಲ್ಲಿಸಿದ್ದು ಇವುಗಳು ಪರಿಶೀಲನೆಯಲ್ಲವೆ. ಹಾಗೂ ಒಂದು ಡ್ರಜ್ಜರನ್ನು ಸಹ ಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಮಂಗಳೂರು ಮೀನುಗಾರಿಕಾ ಧಕ್ಕೆಯಲ್ಲಿ 12,000 ಕಿ.ಮೀ.ನಷ್ಟು ಹೂಳೆತ್ತುವ ಕಾರ್ಯವನ್ನು ಮಾಡಲಾಗಿದೆ. ಮಂಗಳೂರು ಹಳೇ ಬಂದರಿನಲ್ಲಿ ಅದಷ್ಟು ಬೇಗನೇ ಬ್ರೇಕ್‌ವಾಟರ್ ಕಾಮಗಾರಿಯನ್ನು ಮುಗಿಸಿ, ಹೂಳೆತ್ತುವ ಕಾರ್ಯವನ್ನು ತ್ವರಿತವಾಗಿ ಮುಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಮಂಗಳೂರು ಹಳೇ ಬಂದರು ಮತ್ತು ಕಾರವಾರದಿಂದ ದಕ್ಷಿಣಕ್ಕೆ ಇರುವ ಇತರೆ ಎಲ್ಲಾ ಸಣ್ಣ ಬಂದರುಗಳಲ್ಲಿ ಮೇ ತಿಂಗಳ 16ರಿಂದ ಸೆಪ್ಟೆಂಬರ್ 15 ರವರೆಗೆ ಚಟುವಟಿಕೆಗಳನ್ನು ಮಾಡಬಾರದೆಂದು ಭಾರತ ಸರ್ಕಾರದ ಪ್ರಕಟಣೆಯನ್ನು "ವೆಸ್ಟ್‌ಕೋಸ್ಟ್ ಪೈಲಟ್" ಎಂಬ ಪುಸ್ತಕದಲ್ಲಿ ಪ್ರಕಟಿಸಲಾಗಿದೆ. ಅಂತೆಯೇ ಕರ್ನಾಟಕ ಹಾರ್ಬರ್ ಕ್ರಾಫ್ಟ್ ರೂಲ್ಸ್ ೧೯೬೩ರಲ್ಲಿ ಕೂಡ ಸೆಪ್ಟಂಬರ್ ೧೬ರಿಂದ ಮೇ ೧೫ರವರೆಗೆ ಅನುಕೂಲ ಋತುವೆಂದು (ಮೇ ೧೬ರಿಂದ ಸೆಪ್ಟೆಂಬರ್ ೧೫ ರವರೆಗೆ ಪ್ರತಿಕೂಲ ಋತುವೆಂದು) ಕರ್ನಾಟಕ ಸರ್ಕಾರವು ನಮೂದಿಸಿದೆ. ಪ್ರತಿಕೂಲ ಋತುವಿನಲ್ಲಿ ಮೀನುಗಾರಿಕೆ ಕೈಗೊಳ್ಳುವುದು ಅಪಾಯಕಾರಿಯಾಗಿರುತ್ತದೆ. ಈ ಬಗ್ಗೆ ಆಕಾಶವಾಣಿ, ದೂರದರ್ಶನ ಹಾಗೂ ಕರಪತ್ರ ಮುಖಾಂತರ ಮೀನುಗಾರರಿಗೆ ಎಚ್ಚರಿಕೆ ನೀಡಲಾಗುತ್ತಿದೆ. ಎಚ್ಚರಿಸುವ ಫಲಕಗಳನ್ನು ಸಹ ಹಾಕಲಾಗುತ್ತಿದೆ.

(ಮುಂದಿದೆ)

ಶ್ರೀ ವಾಟಾಳ್ ನಾಗರಾಜ್ : ಇದು ಸಭೆಯೇ ಎಲ್ಲರದ್ದು ನೀವು ಒಬ್ಬರೇ ಹೇಳುತ್ತೀರಾ?

ಉಪಾಧ್ಯಕ್ಷಣೆಯವರು : ಇದು ಬರೀ ಮಂಡಿಸುವುದು ಅಷ್ಟೇ.

ಶ್ರೀ ವಾಟಾಳ್ ನಾಗರಾಜ್ : ತಮಗೆ ಪದೇ ಪದೇ ಹೇಳುತ್ತಿದ್ದೇನೆ. ಮೊನ್ನೆ ತಾನೆ ಈ ಪ್ರಶ್ನೆ ಹೇಳಿದ್ದೇನೆ, ಸಭೆ ನೀರಸವಾಗಿದೆ, ಎಲ್ಲಾ ಎಲ್ಲಿ ಹೋಗಿದ್ದಾರೆ.

ಉಪಾಧ್ಯಕ್ಷಣೆಯವರು : ಕೌನ್ಸಿಲ್ ಸಭೆ ನಡೆಯುತ್ತಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸಂಬಂಧಪಟ್ಟ ಸಚಿವರು ಎಲ್ಲಿದ್ದಾರೆ?

ಉಪಾಧ್ಯಕ್ಷಣೆಯವರು : ಅವರು ಕೌನ್ಸಿಲ್‌ನಲ್ಲಿದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ ; ಅಲ್ಲಿ ಹೌಸ್ ನಡೆಯುತ್ತಿಲ್ಲ. ಹೌಸ್ ಅಡ್ಜರ್ನ್ ಆಗಿದೆ. ನಾನು ಈಗ ಅಲ್ಲಿಂದಲೇ ಬಂದೆ. ಇದು ಸರಿಯಲ್ಲ.

ಶ್ರೀ ಎಸ್. ಹೆಚ್. ಕೌಜಲಗಿ : ಆಡಳಿತ ಪಕ್ಷದವರು ಹೌಸ್ ಬಗ್ಗೆ ಇಂಟರೆಸ್ಟ್, ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಲ್ಲ, ಮಂತ್ರಿಗಳು ಈ ಸಭೆಗೆ ಅಗೌರವ ಮಾಡುತ್ತಿದ್ದಾರೆ. ಈ ಸಭೆಯ ಬಗ್ಗೆ ಅವರಿಗೆ ಜವಾಬ್ದಾರಿ ಇಲ್ಲ. ತಾವು ಅವರಿಗೆ ಹೇಳಬೇಕು.

ಉಪಾಧ್ಯಕ್ಷಣೆಯವರು : ವಿಧೇಯಕಗಳನ್ನು ಪಾಸ್ ಮಾಡುವುದಿಲ್ಲ, ಕೇವಲ ಮಂಡನೆ ಮಾಡುವುದು ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ಅದರೂ ಬೇಡ. ಇದು ಸರಿಯಲ್ಲ. ಈ ಸಭೆಯನ್ನು ಅವರು ತಮಾಷೆ, ಮಾಡಿಕೊಳ್ಳುವುದು ಬೇಡ. ಇದು ಸಾರ್ವಭೌಮತ್ವ ಇರತಕ್ಕ ಸಭೆ. ಈ ಸಭೆಯನ್ನು ಅವರು ತಮಾಷೆ ಮಾಡಿಕೊಳ್ಳುವುದು ಬೇಡ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ :ಅವರು ಕೌನ್ಸಿಲ್‌ಗೆ ಹೋಗಿದ್ದಾರೆ

ಶ್ರೀ ವಾಟಾಳ್ ನಾಗರಾಜ್ : ತಾವು ಈಗ ಬಂದಿರಿ. ತಾವೂ ಕೌನ್ಸಿಲ್‌ಗೆ ಹೋಗಿದ್ದಿರಾ?

ಶ್ರೀ ಹೆಚ್. ಏಕಾಂತಯ್ಯ : ಪಾಯಿಂಟ್ ಆಫ್ ಆರ್ಡರ್.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಣೆಯವರೆ....

ಉಪಾಧ್ಯಕ್ಷಣೆಯವರು : ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅವರಿಗೆ ಅವಕಾಶ ಮಾಡಿಕೊಡಿ.

ಶ್ರೀ ಹೆಚ್. ಏಕಾಂತಯ್ಯ : ಮೊಟ್ಟಮೊದಲನೆಯದಾಗಿ ಮಾನ್ಯ ಮಂತ್ರಿಗಳು ಏನು ವಿಧೇಯಕವನ್ನು ಮಂಡಿಸುತ್ತಿದ್ದಾರೆ ಅದು ಅವರ ಹೆಸರಿನಲ್ಲಿಲ್ಲ, ಯಾರ ಹೆಸರಿನಲ್ಲಿ ವಿಧೇಯಕವನ್ನು ಮಂಡಿಸಬೇಕಾಗಿದೆಯೋ, ನೋಟೀಸನ್ನು ಕಳುಹಿಸಿದ್ದಾರೋ, ಅವರೇ ಇಲ್ಲಿದ್ದು ವಿಧೇಯಕವನ್ನು ಮಂಡಿಸಬೇಕಾದುದು ಅವಶ್ಯಕವಿದೆ. ಆದುದರಿಂದ ಇವರಿಗೆ ತಾವು ಪರವಾನಗಿ ಕೊಟ್ಟಿದ್ದೀರಾ?

ಉಪಾಧ್ಯಕ್ಷಣಿಯವರು : ಅವರ ಪರವಾಗಿ ನಾನು ಮಂಡಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಹೆಚ್. ವಿಕಾಂತಯ್ಯ : ಪರವಾಗಿ ಮಂಡಿಸುವುದಕ್ಕೆ ಕಾನೂನು ಪ್ರಕಾರ ಅವಕಾಶವೇ ಇಲ್ಲ. ನಮ್ಮ ನಿಯಮಗಳ ಪ್ರಕಾರ ಮತ್ತು ಸಂಪ್ರದಾಯದ ಪ್ರಕಾರ ಬೇರೆಯವರು ಮಂಡಿಸುವುದಕ್ಕೆ ಅವಕಾಶವಿಲ್ಲ. Not even the Deputy Ministers are allowed in the Parliament..

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ನೀವು ಹಿಂದೆ ಮಂಡಿಸುತ್ತಿದ್ದೀರಲ್ಲಾ ಆಗ ಇದು ಎಲ್ಲಿ ಹೋಗಿತ್ತು? ನೀವು ಸರ್ವಜ್ಞರು ಕುಳಿತು ಮಂಡಿಸುತ್ತಿದ್ದಿರಲ್ಲಾ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಮ್ಮ ಯೋಜನಾ ಸಚಿವರು ಇದ್ದಕ್ಕಿದ್ದಂತೆ ಸರ್ಕಾರವನ್ನು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ಇವತ್ತು ನೀವು ಬದಲಾವಣೆ ಆಗಿದ್ದೀರಾ? ಸಚಿವರು ಎಲ್ಲಿ ಹೋಗಿದ್ದಾರೆ. ಸಂಬಂಧಪಟ್ಟ ಸಚಿವರನ್ನು ಕರೆಯಿಸಿ, ಅವರು ಬರಲಿ,

ಶ್ರೀ ಹೆಚ್. ವಿಕಾಂತಯ್ಯ : ಆನಂತರ ಈ ಪ್ರಶ್ನೆಗೆ ಬರೋಣ. ಮೊದಲು ನಮ್ಮ ಪ್ರಶ್ನೆ ಏನೆಂದರೆ...

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ನೀವು ಸರ್ವಜ್ಞರು ...

ಶ್ರೀ ಹೆಚ್. ವಿಕಾಂತಯ್ಯ : ನನಗೆ ನೀವು ಹೇಳಿದ್ದರಿಂದ ನಾನು ತಮಗೆ ಸರಿಯಾದ ಉತ್ತರವನ್ನೇ ಹೇಳಬೇಕಾಗಿದೆ. ತಾವು ಇಲ್ಲಿ ಕುಳಿತುಕೊಂಡು ಸರ್ವಜ್ಞನ ವಚನವನ್ನು ಹೇಳುತ್ತಿದ್ದೀರಲ್ಲಾ ಈಗ ತಾವು ಏನು ಮಾಡುತ್ತಿದ್ದೀರಿ?

ಉಪಾಧ್ಯಕ್ಷಣಿಯವರು : ಅಲ್ಲಿ ಕುಳಿತಾಗ ಆ ಮಾತನ್ನು ಹೇಳುವುದು, ಇಲ್ಲಿ ಕುಳಿತಾಗ ಹೀಗೆ ಹೇಳುವುದು?

ಶ್ರೀ ಹೆಚ್. ವಿಕಾಂತಯ್ಯ : ಹಾಗಾದರೆ ಅವರು ಏತಕ್ಕೆ ಇದನ್ನು ಕೇಳುತ್ತಾರೆ. ಈಗ ವಚನ, ಉಪದೇಶ ನಮಗೆ ಬೇಕಾಗಿಲ್ಲ. ನಾನು ಕೇಳುತ್ತಿರುವುದು ನಿಯಮಗಳ ಪ್ರಕಾರ ಯಾವ ಮಂತ್ರಿಗಳ ಹೆಸರಿನಲ್ಲಿ ಈ ವಿಧೇಯಕ ಇದೆಯೋ ಅವರೇ ಈ ವಿಧೇಯಕವನ್ನು ಮಂಡಿಸಬೇಕು. ಇದರಲ್ಲಿ ಏನಾದರೂ ಅನುಮಾನ ಇದೆಯೇ? ಯಾವ ನಿಯಮದ ಪ್ರಕಾರ ಎಂಬುದನ್ನು ಬೇಕಾದರೆ ಹೇಳುತ್ತೇನೆ.

ಶ್ರೀ ಎಂ. ಮಹದೇವ್: ಯಾವ ನಿಯಮ ಎಂದು ಹೇಳುತ್ತೀರಿ?

ಶ್ರೀ ಹೆಚ್. ವಿಕ್ರಾಂತಯ್ಯ : ಯಾವ ನಿಯಮ ಎಂದು ಕೇಳುತ್ತಿದ್ದಾರೆ. ಅವರಿಗೆ ಕೌಲ್ ಅಂಡ್ ಶಕ್ದರ್ ಪುಸ್ತಕವನ್ನು ಕೊಡಿ. ಅವರು ಓದಿಕೊಂಡು ಬರಲಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಣಿಯವರೆ, ಈ ಮಾತು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಯಾವ ಮಾತು ಸರಿಯಲ್ಲ ಹೇಳಿ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಆ ರೀತಿ ಹೇಳತಕ್ಕದ್ದು ಸರಿಯಲ್ಲ. ಆ ರೀತಿ ತಮ್ಮ ಬಗ್ಗೆ ಅಗೌರವ ಇದೆ ಎಂದು ಹೇಳತಕ್ಕದ್ದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಏಕಾಂತಯ್ಯನವರು ಪ್ರಸ್ತಾಪ ಮಾಡಿದಂಥ ಉದ್ದೇಶ ಏನೆಂದರೆ, ಇದುವರೆಗೂ ಪದ್ಧತಿಯಂತೆ ಮಂತ್ರಿಗಳು ಇಲ್ಲದಿದ್ದರೂ ಅವರ ಪರವಾಗಿ ಯಾರದರೂ ಬೇರೆ ಮಂತ್ರಿಗಳು ಮಂಡನೆ ಮಾಡಿದಾಗ ನಾವು ಅದನ್ನು ಒಪ್ಪಿಕೊಂಡು ಬರುತ್ತಿದ್ದೆವು. ಆದರೆ ಇಲ್ಲಿ ಪ್ರಶ್ನೆ ಏನೆಂದರೆ, ಈ ರೀತಿ ನಾವು ಹಗುರವಾಗಿ ಇದನ್ನು ಬಿಟ್ಟುಕೊಂಡು ಹೋದರೆ ಮಂತ್ರಿಗಳು ನಿರ್ಲಕ್ಷ್ಯದಿಂದ ಅವರ ಪರವಾಗಿ ಬೇರೆಯವರು ಓದತಕ್ಕ ಅಭ್ಯಾಸವಾಗುತ್ತದೆ. ಆದುದರಿಂದ ಇಂತ ಪರಿಪಾಠವನ್ನು ಮಾಡಬಾರದೆಂಬ ದೃಷ್ಟಿಯಿಂದ ತಾವು ಈ ಸಂದರ್ಭದಲ್ಲಿ ಇದಕ್ಕೆ ಅವಕಾಶ ಮಾಡಿಕೊಡಬೇಡಿ. ಸಂಬಂಧಪಟ್ಟ ಮಂತ್ರಿಗಳು ಬಂದಮೇಲೆ ಅವರೇ ಮಂಡನೆ ಮಾಡಲಿ. ಬೇರೆ ಮಸೂದೆಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದು ಅಗತ್ಯವಿದೆ.

ಶ್ರೀ ಎಂ. ಮಹದೇವ್: ಆ ಕಾನೂನು ಎಲ್ಲಿದೆ?

ಶ್ರೀ ಹೆಚ್. ಏಕಾಂತಯ್ಯ: ಸಂಬಂಧಪಟ್ಟ ಮಂತ್ರಿಗಳು Should alone move the Bill for introduction. Other Ministers are not allowed to move the Bill..

ಇದನ್ನು ಮಾನ್ಯ ಮಹದೇವ್‌ರವರಿಗೆ ಕಳುಹಿಸಿಕೊಡುತ್ತೇನೆ. ಏಕೆಂದರೆ ಕಾನೂನು ಎಲ್ಲಿದೆ ಎಂದು ಕೇಳುತ್ತಿದ್ದಾರೆ.

ಶ್ರೀ ಎಂ. ಮಹದೇವ್: ನೀವು ಓದಿ ಎಲ್ಲರೂ ಕೇಳಿಕೊಳ್ಳಬಹುದು.

ಶ್ರೀ ಹೆಚ್. ಏಕಾಂತಯ್ಯ : ನಿಯಮ ಸಂಪ್ರದಾಯಗಳನ್ನು ಎಲ್ಲಿವೆ ಎಂದು ಅವರಿಗೆ ಹೇಳಿಕೊಡಬೇಕಾಗಿಲ್ಲ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕಾರಣ ಏನೋ ಗೊತ್ತಾಗಲಿಲ್ಲ. ನೀವು ಏತಕ್ಕೆ ಇದ್ದಕ್ಕಿದ್ದಂತೆ ಬದಲಾವಣೆಯಾಗಿದ್ದೀರಿ ತಾವು ಶಾಂತವಾಗಿ - ಕುಳಿತುಕೊಳ್ಳುತ್ತಿದ್ದಿರಿ. ತಾವು ಬದಲಾವಣೆ ಆಗಿದ್ದೀರಾ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಕಾಮಾಲೆ ಕಣ್ಣಿನವರಿಗೆ ಪ್ರಪಂಚವೆಲ್ಲಾ ಹಳದಿಯಾಗಿ ಕಾಣಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್: ನೀವು ಏನೋ ಪಿತೂರಿ ಮಾಡುತ್ತಿದ್ದೀರಿ.

ಉಪಾಧ್ಯಕ್ಷಿಣಿಯವರು: ಈ ರೀತಿ ಮಂತ್ರಿಯ ಪರವಾಗಿ ಮತ್ತೊಬ್ಬರು ವಿಧೇಯಕವನ್ನು ಇಂಟ್ರಡಕ್ಷನ್ ಮಾಡತಕ್ಕದ್ದು ಇದು ಮೊದಲನೇ ಸಾರಿ ಅಲ್ಲ. ಹಿಂದೆ ಕೂಡ ಸಾಕಷ್ಟು ಸಾರಿ ಇದೇ ರೀತಿ ಮಾಡಿಕೊಂಡು ಬಂದಿದ್ದೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಈ ಸಂಪ್ರದಾಯವನ್ನು ಮೀರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಶಿವಣ್ಣ: ಮಾನ್ಯ ಉಪಾಧ್ಯಕ್ಷಿಣಿಯವರೆ ತಾವು ರೂಲಿಂಗ್‌ನ್ನು ಕೊಡುವಾಗ..

Sri. H. Ekanthaiah : You should give a considered ruling in the matter..

ಶ್ರೀ ವಾಟಾಳ್ ನಾಗರಾಜ್ : ಇನ್ನೂ ಕೊಟ್ಟಿಲ್ಲ. ಅವರು ತಮ್ಮ ತೀರ್ಪನ್ನು ಕೊಡುವ ಮುಂಚೆ ನಾವು ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ : ತಾವು ಕಾನೂನನ್ನು, ನಿಯಮಗಳನ್ನು, ಸಂಪ್ರದಯಾಗಳನ್ನು ಪರಿಶೀಲಿಸಿ ಕನ್ಸಿಡರ್ಡ್ ರೂಲಿಂಗ್‌ನ್ನು ಕೊಡಬೇಕು. ಆಲ್ ರೈಟ್. ಈಗ ಆಯಿತು. ಆಗ ಆಗಿರಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಅತ್ತೂ ಕರೆದು ಆರೋಗ್ಯ ಮಂತ್ರಿಗಳನ್ನು ಸದನಕ್ಕೆ ಕರೆಸಿಕೊಳ್ಳಬೇಕಾಯಿತು.

ಉಪಾಧ್ಯಕ್ಷಿಣಿಯವರು : ಈ ರೀತಿ ನಡೆಯುತ್ತಿರುವುದು ಇದು ಮೊದಲನೆಯ ಸಲವಲ್ಲ. ಹಿಂದಿನಿಂದಲೂ ಕೂಡ ನಡೆದುಕೊಂಡು ಬಂದಿದೆ. ಈಗ ಮಾನ್ಯ ಮಂತ್ರಿಗಳು ಬಂದಿರುತ್ತಾರೆ. ಒಂದು ಸ್ಟೇಜ್‌ಗೆ ಬಂದಿರುತ್ತೇವೆ. ಮಾನ್ಯ ಮಂತ್ರಿಗಳು ಈಗ ವಿಧೇಯಕಗಳನ್ನು ಮಂಡಿಸಬೇಕು.

ಶಾಸನ ರಚನೆ ಕಾರ್ಯಕಲಾಪಗಳು

ವಿಧೇಯಕಗಳನ್ನು ಮಂಡಿಸುವುದು

1992ರ ಕರ್ನಾಟಕ ಹೋಮಿಯೋಪಥಿ ವೃತ್ತಿ ನಿರತ ವೈದ್ಯರ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜಿ. ಪುಟ್ಟಸ್ವಾಮಿ ಗೌಡ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ 1992ನೇ ಸಾಲಿನ ಕರ್ನಾಟಕ ಹೋಮಿಯೋಪಥಿ ವೃತ್ತಿ ನಿರತ ವೈದ್ಯರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ"1992ನೇ ಸಾಲಿನ ಕರ್ನಾಟಕ ಹೋಮಿಯೋಪಥಿ ವೃತ್ತಿನಿರತ ವೈದ್ಯರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ಹೋಮಿಯೋಪಥಿ ವೃತ್ತಿ ನಿರತ ವೈದ್ಯರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

1992ನೇ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೃತ್ತಿ ನಿರತ ವೈದ್ಯರ ನೋಂದಣಿ ಮತ್ತು ವೈದ್ಯಕೀಯ ವೃತ್ತಿ ನಿರತರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕ.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ 1992ನೇ ಸಾಲಿನ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೃತ್ತಿನಿರತ ವೈದ್ಯರ ನೋಂದಣಿ ಮತ್ತು ವೈದ್ಯಕೀಯ ವೃತ್ತಿ